
### ಕಣ್ಣಿನ ಚಿಕಿತ್ಸೆಗೆ ಅತ್ಯಾಧುನಿಕ ತಂತ್ರಜ್ಞಾನ

# ಸಮಸ್ಯೆ ಮೂರು; ಚಿಕಿತ್ಸೆ ಒಂದು!




**ಸುಮಾರು ಒಂದು ವರ್ಷದಿಂದ ಕಣ್ಣಿನ ಮೂರು ಸಮಸ್ಯೆಗಳಿಂದ ಬಳಲುತ್ತಿದ್ದ 75ರ ಹರೆಯದ ವೃದ್ಧನಿಗೆ ಒಂದೇ ಶಸ್ತ್ರಚಿಕಿತ್ಸೆ ಮಾಡಿ ದೃಷ್ಟಿದೋಷವನ್ನು ಸಂಪೂರ್ಣ ನಿವಾರಿಸಲಾಗಿದೆ. ಇದು ವೈದ್ಯಲೋಕದ ಮತ್ತೊಂದು ಮುನ್ನಡೆ ಎನ್ನಬಹುದು.**

■ ಉಮಾ ವೇಣೂರು

ದೂರದ ಯೆಮನ್‌ನಿಂದ ಬೆಂಗಳೂರಿಗೆ ಬಂದ ಆ ಅಜ್ಜನಿಗೆ ವಿಪರೀತ ಕಣ್ಣಿನ ಸಮಸ್ಯೆ. ಇದಕ್ಕೆ ಕಾರಣವೂ ಇತ್ತು. ಸುಮಾರು 75 ವರ್ಷದ ಖಾಸಿಂ ಅಬ್ದುಲ್ ಬಾರಿ ಕರೀಂ ಅವರು ಕ್ಯಾಟರಾಕ್ಟ್, ಗ್ಲಾಕೊಮಾ ಹಾಗೂ ಅಕ್ಷಿಪಟಲದ ಹಾನಿಯಿಂದ ಬಳಲುತ್ತಿದ್ದರು. ಮನೆಯಲ್ಲಿ ಕೆಲಸ ಮಾಡುವಾಗ ಕಲ್ಲಿನ ಕಿಡಿ ಅವರ ಎಡ ಕಣ್ಣಿಗೆ ಸಿಡಿದು ಈ ಸಮಸ್ಯೆ ಉಂಟಾಗಿತ್ತು. ಸ್ಥಳೀಯವಾಗಿ ಚಿಕಿತ್ಸೆ ಪಡೆದರೂ ಅವರಿಗೆ ಒಂಬತ್ತು ತಿಂಗಳಲ್ಲಿ ದೃಷ್ಟಿ ಮಂದವಾಯಿತು. ಒಂದು ಅಡಿ ಅಂತರ ಮೀರಿ ಏನೂ ಕಾಣುತ್ತಿರಲಿಲ್ಲ. ಸ್ನೇಹಿತರೊಬ್ಬರ ಶಿಫಾರಸ್ಸಿನ ಮೇರೆಗೆ ಅವರು ಬೆಂಗಳೂರಿನ ಅಗರ್‌ವಾಲ್ ಕಣ್ಣಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದರು. ಇಲ್ಲಿ ಕಣ್ಣಿನ ಮೂರೂ ಸಮಸ್ಯೆಗಳಿಗೆ ಒಂದು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಈಗ ಖಾಸಿಂ ದೃಷ್ಟಿ ಸಮಸ್ಯೆ ಸಂಪೂರ್ಣ ಪರಿಹಾರವಾಗಿದೆ.

'ಖಾಸಿಂ ಅಬ್ದುಲ್ ಕರೀಂ ಅವರ ಎಡಕಣ್ಣಿಗೆ ಕಲ್ಲಿನ ಕಿಡಿ ಹಾರಿ ಸಮಸ್ಯೆ ಉಂಟಾದ ಕೂಡಲೇ ಯೆಮನ್‌ನ ಸ್ಥಳೀಯ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆದಿದ್ದಾರೆ. ಅಲ್ಲಿ ಅಕ್ಷಿಪಟಲ (ಐರಿಸ್), ಕ್ಯಾಟರಾಕ್ಟ್ ಹಾಗೂ ಗ್ಲಾಕೋಮಾ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಬದಲಿಗೆ ಉಲ್ಬಣವೇ ಆಯಿತು. ಕಣ್ಣಿನ ಮೇಲೆ ಹೆಚ್ಚಿನ ಒತ್ತಡ ಬೀಳಲಾರಂಭಿಸಿತು. ಕಣ್ಣು ಕಾಣಿಸದೇ ಇದ್ದಾಗ ಕಾಂಟ್ಯಾಕ್ಟ್ ಲೆನ್ಸ್ ಸಹ ಅಳವಡಿಸಲು ಸಾಧ್ಯವಾಗಿರಲಿಲ್ಲ. ಜತೆಗೆ ಅವರು ಹಂತ ಹಂತವಾಗಿ ದೃಷ್ಟಿ ಕಳೆದುಕೊಳ್ಳಲು ಕಾರಣವಾಯಿತು. ಒಂಬತ್ತು ತಿಂಗಳ ಅವಧಿಯಲ್ಲಿ ದೃಷ್ಟಿ ಬಹುತೇಕ ಮಂದವಾಯಿತು. ಅಂದರೆ ಒಂದು ಅಡಿ ಅಂತರವನ್ನು ಮೀರಿ ಅವರು ಏನನ್ನು ನೋಡುವ ಸ್ಥಿತಿಯಲ್ಲಿ ಇರಲಿಲ್ಲ. ಅವರು ತಮ್ಮ ದೃಷ್ಟಿಯನ್ನೇ ಕಳೆದುಕೊಳ್ಳುವ ಸ್ಥಿತಿಯನ್ನು ತಲುಪಿದ್ದರು. ಚಿಕಿತ್ಸೆಗಾಗಿ ಖಾಸಿಂ ಬೆಂಗಳೂರಿನ ಅಗರ್‌ವಾಲ್ ಕಣ್ಣಿನ ಆಸ್ಪತ್ರೆಗೆ ದಾಖಲಾದರು. ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಈಗ ಅವರು 10 ಅಡಿ ಅಂತರದವರೆಗಿನ ಪರಿಕರಗಳನ್ನು ನೋಡಲು ಶಕ್ತರಾಗಿದ್ದಾರೆ' ಎಂದು ಹೇಳುತ್ತಾರೆ ಅಗರ್‌ವಾಲ್ ಆಸ್ಪತ್ರೆಯ ನೇತ್ರತಜ್ಞೆ ಡಾ.ಬಿಂದಿಯಾ ಹಪನಿ.



'ಖಾಸಿಂ ಕಣ್ಣಿನ ಗ್ಲ್ಯುಯಿಡ್ ಐಒಎಲ್ ಸರ್ಜರಿಗೆ ಒಳಗಾದರು. ಗ್ಲ್ಯುಯಿಡ್ ಐಒಎಲ್ ಎಂಬುದು ಅತ್ಯಾಧುನಿಕವಾದ ಚಿಕಿತ್ಸೆಯಾಗಿದ್ದು, ಈ ಶಸ್ತ್ರಚಿಕಿತ್ಸೆಯನ್ನು ಅಗರವಾಲ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಅಮರ್ ಅಗರವಾಲ್ ಅವರೇ ಅನ್ವೇಷಿಸಿದ್ದರು. ಈ ಚಿಕಿತ್ಸೆಯ ಮೂಲಕ ವೈದ್ಯರು, ಧಕ್ಕೆಯಾಗಿರುವ ಲೆನ್ಸ್ ಬದಲಾವಣೆಯಷ್ಟೇ ಅಲ್ಲ, ಗ್ಲಾಕೋಮಿಯ ಗುಣಪಡಿಸಲು ನೆರವಾದರು. ಇದರಿಂದ ಖಾಸಿಂಗೆ ಬೇಗನೆ ಗುಣವಾಗಲು ಸಾಧ್ಯವಾಯಿತು' ಎಂದು ಹೇಳುತ್ತಾರೆ ಡಾ.ಬಿಂದಿಯಾ.

'ಹಾಗೆ ನೋಡಿದರೆ ಖಾಸಿಂಗೆ ಒಂದೇ ಸಂದರ್ಭದಲ್ಲಿ ಕಣ್ಣಿನ ನಾಲ್ಕು ವಿವಿಧ ಸಮಸ್ಯೆಗಳು ಕಂಡುಬಂದಿದ್ದವು. ಚಿಕಿತ್ಸೆಯು ದೊಡ್ಡ ಸವಾಲಿನದೂ ಆಗಿತ್ತು. ಏಕೆಂದರೆ ಈ ಸಮಸ್ಯೆಯಿಂದ ಅವರು ಬಹಳ ದಿನಗಳಿಂದ (ಸುಮಾರು ಒಂದು ವರ್ಷದಿಂದ) ಬಳಲುತ್ತಿದ್ದರು. ಇದನ್ನು ವ್ಯವಸ್ಥಿತವಾಗಿ ಬಗೆಹರಿಸಬೇಕಾಗಿತ್ತು. ಮೊದಲಿಗೆ ಅವರಲ್ಲಿ ಕಣ್ಣಿನಿಂದ ಸಬ್ಲಕ್ಸೆಟೆಡ್ ಕ್ಯಾಟರಾಕ್ಟ್ ಪಟಲವನ್ನು ತೆಗೆಯಲಾಯಿತು. ನಂತರ ಇಂಟ್ರಾಕ್ಯುಲರ್ ಲೆನ್ಸ್ ಅನ್ನು ಅಳವಡಿಸಲಾಯಿತು. ಈ ವಿಭಿನ್ನ ಚಿಕಿತ್ಸಾ ಕ್ರಮವನ್ನು ಗ್ಲ್ಯುಯಿಡ್ ಐಒಎಲ್ ಎಂದು ಹೇಳಲಾಗುತ್ತದೆ. ಅದಾಗಿ ಅವರ ಐರಿಸ್‌ಗೆ ಸಂಬಂಧಿಸಿದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಯಿತು. ಈ ಹಂತದಲ್ಲಿ ಅವರು ಎಂದಿನಂತೆ ನೋಡಲು ಶಕ್ತರಾದರು' ಎಂದು ಚಿಕಿತ್ಸೆಯ ವಿವಿಧ ಹಂತಗಳನ್ನು ವಿವರಿಸುತ್ತಾರೆ ಈ ವೈದ್ಯರು.

'ಚಿಕಿತ್ಸೆಗೆ ರೋಗಿಯು ಚೆನ್ನಾಗಿ ಸ್ಪಂದಿಸುತ್ತಿದ್ದಾರೆ. ಗ್ಲ್ಯುಯಿಡ್ ಐಒಎಲ್ ಚಿಕಿತ್ಸೆಯಲ್ಲಿ ಜೈವಿಕ ಗ್ಲೂ ಬಳಕೆ ಮಾಡಿದ್ದು, ಇದರಿಂದ ಅಡ್ಡಪರಿಣಾಮಗಳ ಸಾಧ್ಯತೆ ಇಲ್ಲ. ಜತೆಗೆ ಆಸ್ಪತ್ರೆಯಲ್ಲಿ ಉಳಿಯುವ ಅಗತ್ಯವೂ ಇಲ್ಲ. ಈ ಚಿಕಿತ್ಸೆಗೆ ಆರೋಗ್ಯ ವಿಮೆಯನ್ನೂ ಬಳಸಿಕೊಳ್ಳಬಹುದು' ಎಂದು ಹೇಳುತ್ತಾರೆ ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆಯ ವಿಟ್ರಿಯೊ ರೆಟಿನಾಲ್ ಸರ್ಜನ್ ಡಾ.ಆಶ್ರಯ ನಾಯಕ್ ಟಿ.ಇ.

'ಈ ಇಳಿ ವಯಸ್ಸಿನ ಖಾಸಿಂ ಅವರು ಗ್ಲ್ಯುಯಿಡ್ ಐಒಎಲ್ ಚಿಕಿತ್ಸೆಯ ಒಬ್ಬ ಫಲಾನುಭವಿಯಾಗಿದ್ದರೂ ಇಂಥ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಚಿಕಿತ್ಸೆ ಪಡೆದು ಗುಣಮುಖರಾಗುವಲ್ಲಿ ಭರವಸೆ ಮೂಡಿಸಿದ್ದಾರೆ' ಎಂದು ಹೇಳುತ್ತಾರೆ ಡಾ. ಆಶ್ರಯ.

'ದೃಷ್ಟಿ ಕಳೆದುಕೊಂಡು ನಾನು ಮಾನಸಿಕ ಹಾಗೂ ದೈಹಿಕವಾಗಿ ತುಂಬ ಬಳಲಿದ್ದೆ. ಕಣ್ಣು ಕಳೆದುಕೊಂಡು ನನ್ನ ಭವಿಷ್ಯವೇ ಹಾಳಾಯಿತು ಎಂದುಕೊಂಡಿದ್ದೆ. ಇಲ್ಲಿಗೆ ಬಂದು ಚಿಕಿತ್ಸೆ ಪಡೆದ ಬಳಿಕ ಮರುಜೀವ ಬಂದಂತಾಗಿದೆ. ಇನ್ನು ನಾನು ಮನೆಯವರನ್ನು ಅವಲಂಬಿಸಬೇಕಾಗಿಲ್ಲ, ಸ್ವತಂತ್ರ ಜೀವನ ನಡೆಸುವ ಆತ್ಮವಿಶ್ವಾಸ ಬಂದಿದೆ' ಎಂದು ಹೇಳುತ್ತಾರೆ ಖಾಸಿಂ ಅಬ್ದುಲ್ ಬಾರಿ. ■